

ಸುದ್ದಿ ಸಂಚಯ




# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು (ಫೆಬ್ರವರಿ ೨೫)

**ಪ್ರಧಾನ ಕೇಂದ್ರ ಬೇಲೂರು ಮಠ:** ಪೂರ್ವರಾಜ್ಯಗಳಲ್ಲಿ ಅತ್ಯಂತ ಪ್ರಸಿದ್ಧ ದಿನಪತ್ರಿಕೆಯಾದ 'ಸನ್ಮಾರ್ಗ' ವು ರಾಮಕೃಷ್ಣ ಮಠ ಹಾಗೂ ಮಿಷನ್ನಿಗೆ ಅದು ಸಮಾಜಕ್ಕೆ ಸಲ್ಲಿಸುತ್ತಿರುವ ನಿಸ್ವಾರ್ಥ ಸೇವೆಗಾಗಿ ಫೆಬ್ರವರಿ ೮ರಂದು 'Sanmarg Legacy Award for Exceptional Services' ಅನ್ನು ನೀಡಿ ಗೌರವಿಸಿದೆ.

**ವಿವೇಕ ದ್ವಾರ:** ಹೌರಾದ ರಾಮಕೃಷ್ಣ ಘಾಟ್‌ನಲ್ಲಿ ನಿರ್ಮಿತವಾದ ಈ ದ್ವಾರವನ್ನು ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ಫೆಬ್ರವರಿ ೧೮ರಂದು ಉದ್ಘಾಟಿಸಿದರು. ಶ್ರೀರಾಮಕೃಷ್ಣರ ಗೃಹೀ ಭಕ್ತರಾದ ನವಗೋಪಾಲ್ ಘೋಷ್ ಅವರ ಮನೆಗೆ ಸ್ವಾಮಿ ವಿವೇಕಾನಂದರು ೧೮೯೮ರಲ್ಲಿ ನೀಡಿದ್ದ ಭೇಟಿಯ ಸ್ಮರಣಾರ್ಥವಾಗಿ ಈ ದ್ವಾರವನ್ನು ನಿರ್ಮಿಸಲಾಗಿತ್ತು. ಸ್ವಾಮಿ ಭಜನಾನಂದಜಿ, ಸ್ವಾಮಿ ಗಿರೀಶಾನಂದಜಿ, ಪ್ರಧಾನ ಕಾರ್ಯದರ್ಶಿಗಳು ಹಾಗೂ ಇನ್ನಿತರ ಗಣ್ಯರು ಭಾಗವಹಿಸಿದ್ದರು.

ಸ್ವಾಮಿ ವಿವೇಕಾನಂದರು ತಮ್ಮ ಅಮೆರಿಕಾ ಭೇಟಿಯ ನಂತರ ೧೮೯೭ರಲ್ಲಿ ಕೊಲ್ಕತ್ತಕ್ಕೆ ಮರಳಿದ್ದರ **128ನೇ ವಾರ್ಷಿಕೋತ್ಸವವನ್ನು** ಬೇಲೂರು ಮಠವು ಇನ್ನಿತರ ಸಂಘಸಂಸ್ಥೆಗಳೊಂದಿಗೆ ವಿಜೃಂಭಣೆಯಿಂದ ಆಚರಿಸಿತು. ಸ್ವಾಮಿ ವಿವೇಕಾನಂದರ ಭವ್ಯಮೂರ್ತಿಯನ್ನು ಒಳಗೊಂಡ ವಿಶೇಷ ಬೋಗಿಯನ್ನು ಬಜ್‌ಬಜ್ ಸ್ಟೇಶನ್ನಿನಿಂದ ಸಿಯಾಲ್ದಾ ಸ್ಟೇಶನ್ನಿಗೆ ತರಲಾಯಿತು. ಬಳಿಕ ಅಲ್ಲಿ ಸಾರ್ವಜನಿಕ ಸಭೆ ನಡೆಯಿತು. ಸಂಜೆ ಅಲ್ಲಿಂದ ಆಲಂಬಜಾರ್ ಮಠಕ್ಕೆ ಬೃಹತ್ ಮೆರವಣಿಗೆ ನಡೆಯಿತು.

**ಮಠದ ಹೊಸ ಶಾಖಾಕೇಂದ್ರ :** ಮಧ್ಯಪ್ರದೇಶದ **ರೇವಾ**ದಲ್ಲಿ ಹೊಸ ಮಠ ಶಾಖಾಕೇಂದ್ರವು ಆರಂಭಗೊಂಡಿತು.

**ಶಾಖಾಕೇಂದ್ರಗಳಲ್ಲಿ ನಡೆದ ಚಟುವಟಿಕೆಗಳು:** ಜನವರಿ ೭ರಿಂದ ೩೧ರ ವರೆಗೆ **ರಾಂಚಿ ಮೊರಾಬಾದಿ** ಕೇಂದ್ರದಲ್ಲಿ ೫ ಕೃಷಿ ಮೇಳಗಳು ನಡೆದವು. ಇದರಲ್ಲಿ ಒಟ್ಟು ೨೬೫೦೦ ಮಂದಿ ಕೃಷಿಕರು ಪಾಲ್ಗೊಂಡರು. **ಇಂಫಾಲ್** ಆಶ್ರಮದ ಶಾಲೆಯಲ್ಲಿ ವಿಜ್ಞಾನ ಮ್ಯೂಸಿಯಂ ಅನ್ನು ಪ್ರಾರಂಭಿಸಲಾಗಿದೆ. **ಆಲೋ** ಕೇಂದ್ರದಲ್ಲಿ ದಿವ್ಯತ್ರಯರ ಮೂರ್ತಿಗಳನ್ನೊಳಗೊಂಡ ಮಂಟಪವನ್ನು ಫೆಬ್ರವರಿ ೨ರಂದು ಉದ್ಘಾಟಿಸಲಾಯಿತು. **ಪಾಟ್ನಾ** ಕೇಂದ್ರದಲ್ಲಿ ಫೆಬ್ರವರಿ ೧೧ರಿಂದ ೧೬ರ ವರೆಗೆ ಶತಮಾನೋತ್ಸವದ (೧೯೨೨-೨೦೨೨) ಮೊದಲ ಹಂತವನ್ನು ಆಚರಿಸಲಾಯಿತು. ವಿಶೇಷ ಪೂಜೆ, ಸಾರ್ವಜನಿಕ ಸಭೆ, ಭಜನೆ ಇತ್ಯಾದಿ ಕಾರ್ಯಕ್ರಮಗಳು ನೆರವೇರಿದವು. **ವೃಂದಾವನ** ಕೇಂದ್ರದ ಆಸ್ಪತ್ರೆಯಲ್ಲಿ ಹೊಸದಾಗಿ ನಿರ್ಮಿಸಲಾದ ಶಾರದಾ ಬ್ಲಾಕ್ ಅನ್ನು ಫೆಬ್ರವರಿ ೧೨ರಂದು ಸ್ವಾಮಿ ಗೌತಮಾನಂದಜಿ ಮಹಾರಾಜ್ ಉದ್ಘಾಟಿಸಿದರು. **ತಿರುವಲ್ಲ** ಕೇಂದ್ರದಲ್ಲಿ ಫೆಬ್ರವರಿ ೧೨ರಂದು ನೂತನವಾಗಿ ನಿರ್ಮಿತವಾದ ಭೋಜನಾಲಯ ಹಾಗೂ ವಿಚಾರ ಸಂಕಿರಣ ಹಾಲ್ ಅನ್ನು ಉದ್ಘಾಟಿಸಲಾಯಿತು.

**ವಿದೇಶಗಳಲ್ಲಿ ನಡೆದ ಚಟುವಟಿಕೆಗಳು :** **ಲುಸಾಕ** (ಝಾಂಬಿಯಾ) ಕೇಂದ್ರದಲ್ಲಿ ಫೆಬ್ರವರಿ ೫ರಂದು ಸ್ವಾಮಿ ಸುಹಿತಾನಂದಜಿಯವರು ಹೊಸ ಬಹೂಪಯೋಗಿ ಕಟ್ಟಡವನ್ನು ಉದ್ಘಾಟಿಸಿದರು. **ಕೊಲಂಬೋ** ಕೇಂದ್ರದಲ್ಲಿ ಫೆಬ್ರವರಿ ೧೦ರಂದು ಸ್ವಾಮಿ ಸುಹಿತಾನಂದಜಿಯವರು 'ಶಿವಾನಂದ ಕಲ್ಯಾಣ ಕೇಂದ್ರ'ವನ್ನು ಉದ್ಘಾಟಿಸಿದರು. ಅದರ ಉಪ-ಕೇಂದ್ರವಾಗಿರುವ **ಬಟ್ಟಿಕಲೋವ**ದಲ್ಲಿ ಶ್ರೀಲಂಕಾದಲ್ಲಿ ರಾಮಕೃಷ್ಣ ಮಿಷನ್ನಿನ ಚಟುವಟಿಕೆಗಳ ಶತಮಾನೋತ್ಸವದ (೧೯೨೬-೨೦೨೬) ಮೊದಲ ಹಂತವನ್ನು ಆರಂಭಿಸಲಾಯಿತು.

**ಮೌಲ್ಯಶಿಕ್ಷಣ ಕಾರ್ಯಕ್ರಮ ಹಾಗೂ ಯುವಸಮ್ಮೇಳನಗಳು:** ಬರಿಶಾ, ಗುರುಗ್ರಾಮ, ಹಲಸೂರು, ರಾಜಮಹೇಂದ್ರವರಂ ಕೇಂದ್ರಗಳಲ್ಲಿ ವಿವಿಧ ಮೌಲ್ಯಶಿಕ್ಷಣ ಕಾರ್ಯಕ್ರಮಗಳು, ಹಾಗೂ ಕೊಯಮತ್ತೂರು ಮಿಷನ್, ದಾವಣಗೆರೆ, ಮುಂಬೈ, ರಾಯಪುರ, ರಾಜ್‌ಕೋಟ್, ಸೇಲಂ, ತಂಜಾವೂರು ಕೇಂದ್ರಗಳಲ್ಲಿ ಯುವಸಮ್ಮೇಳನ ಹಾಗೂ ಇತರ ಕಾರ್ಯಕ್ರಮಗಳು ನಡೆದವು.






Managing Editor : Swami Muktidananda
Editor : Swami Jnanayogananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020